ಪಠಣ ಕುತೂಹಲ

ಎಂ.ಎಸ್. ಶ್ರೀರಾಮ್



# ವಿಕೇಂದ್ರೀಕರಣ ಸ್ಥಳೀಯತೆಯ ವಿಚಾರಗಳು

ವಾರಕ್ಕೆ ಹದಿನೈದು ತಾಸುಗಳ ಕೆಲಸ, ಮತ್ತು ಮಿಕ್ಕ ಸಮಯದಲ್ಲಿ ಸಂಗೀತ–ಸಾಹಿತ್ಯ–ಕಲೆಯ ಮೇಲೆ ಕಳೆಯಬಹುದಾದ ಸಂತೃಪ್ತ ಜೀವನ ಸಿಗಬಹುದಾದರೆ– ಬಹುಮಹಡಿಯ ಮನೆ, ದೊಡ್ಡ ಕಾರು, ಅಪಾರ ಶ್ರೀಮಂತಿಕೆಯಿಂದ ಅದೇ ಸುಖ ಸಿಗುವುದೇ... ಅಥವಾ ಅದು ಕೇವಲ ಲೋಲುಪತೆಯ ಭ್ರಮೆಯೇ...

ಆರ್ಥಿಕ ಬೆಳವಣಿಗೆ ಮತ್ತು ಹಲವು ಟ್ರಿಲಿಯನ್ ಡಾಲರುಗಳ ಅರ್ಥವ್ಯವಸ್ಥೆ ಆಗಬೇಕೆನ್ನುವ ಇಂದಿನ ಅವಸರದ ಯುಗದಲ್ಲಿ ಸ್ವಲ್ಪ ನಿಂತು, ದೀರ್ಘ ಉಸಿರೆಳೆದು ಅನುಲೋಮ ವಿಲೋಮ ಮಾಡುತ್ತಾ ನಮ್ಮ ಅರ್ಥವ್ಯವಸ್ಥೆಯನ್ನು ನೋಡಬಹುದೇ? 'ನಮ್ಮ ಅವಶ್ಯಕತೆಗಳನ್ನು ತೀರಿಸುವಷ್ಟು ಉದಾರತೆ ಭೂತಾಯಿಗಿದೆ. ಆದರೆ ದುರಾಸೆಯನ್ನು ನಮ್ಮ ಪರಿಸರ ಪೂರೈಸುವುದಿಲ್ಲ' ಎಂದು ಮಹಾತ್ಮಾ ಗಾಂಧಿ ಬಹಳ ವರ್ಷಗಳ ಹಿಂದೆಯೇ ಹೇಳಿದ್ದರು. ಇಂದು ಪರಿಸರವಾದಿಗಳು ಮಂಡಿಸುತ್ತಿರುವ ವಿಚಾರವನ್ನು ಬಹಳ ಹಿಂದೆಯೇ ಗಾಂಧಿ ಮತ್ತು ಜೆ.ಸಿ. ಕುಮಾರಪ್ಪ ಸರಳವಾಗಿ ಸ್ಥಳೀಯತೆಯ ತತ್ವ ಮತ್ತು ಗ್ರಾಮಸ್ವರಾಜ್ಯದ ರೂಪದಲ್ಲಿ ಪ್ರಸ್ತುತ ಪಡಿಸಿದ್ದರು. ಯಂತ್ರಗಳಿಂದ ತಯಾರಿಸುವ, ಕೇಂದ್ರೀಕೃತ ವ್ಯವಸ್ಥೆಗೆ ವಿರುದ್ಧ ಸಾಗುವ, ಮಾನವನ ಕೈಕೆಲಸದ ಶ್ರಮವನ್ನು ಗೌರವಿಸುವ ಈ ವಿಚಾರಧಾರೆ ಆಧುನಿಕತೆಗೆ ವಿರುದ್ಧವಾಗಿ ಸಾಗುತ್ತದೆಯೇ? ಇದು ನಮ್ಮ ಇಂದಿನ ಪರಿಸ್ಥಿತಿಯಲ್ಲಿ ಎಷ್ಟು ಪ್ರಸ್ತುತ? ಈ ಪ್ರಶ್ನೆಗಳನ್ನು ಹಲವು ರೀತಿಯಲ್ಲಿ ಚಿಂತಕರು ಕೇಳಿದ್ದಾರೆ. ಸುಮನಸ್ ಕೌಲಗಿ ಈಚೆಗೆ ಪ್ರಕಟಿಸಿರುವ 'ಡೆವಲಪ್‌ಮೆಂಟ್ ಆ್ಯಸ್ ಸ್ವರಾಜ್' ಎನ್ನುವ ಪುಸ್ತಕ ಮಹಾತ್ಮಾ ಗಾಂಧಿ ಮತ್ತು ಕುಮಾರಪ್ಪನವರ ವಿಚಾರಗಳನ್ನು ಸಮಕಾಲೀನ ಅರ್ಥವ್ಯವಸ್ಥೆಯಲ್ಲಿಟ್ಟು ಮತ್ತೊಮ್ಮೆ ಎಲ್ಲ ಮೂಲಭೂತ ಪ್ರಶ್ನೆಗಳನ್ನೂ ಎತ್ತುತ್ತದೆ.

ಕೇಂದ್ರೀಕೃತ ಉದ್ಯಮದಲ್ಲಿ ಕಚ್ಚಾಮಾಲು ದೂರದಿಂದ ಬರುತ್ತದೆ. ಉದ್ಯಮದಲ್ಲಿ ಕೆಲಸಮಾಡುವ ಕೆಲಸಗಾರರು ಕೂಡಾ ಹೊರಗಿನಿಂದ ಬರುತ್ತಾರೆ. ದೊಡ್ಡ ಮಟ್ಟದಲ್ಲಿ ಯಂತ್ರಗಳು ಉತ್ಪಾದನೆ ಮಾಡಿದರೆ, ಅದರ ಗ್ರಾಹಕರನ್ನು ತಲುಪಲು ಮತ್ತೆ ದೂರದೂರಕ್ಕೆ ಮಾಲನ್ನು ಸಾಗಿಸಬೇಕು. ಈ ಎಲ್ಲವೂ ಮಾನವನ ಶ್ರಮವನ್ನು ಕಡಿಮೆ ಮಾಡಲು ರೂಪಿಸಿರುವ ಆಧುನಿಕ ತಂತ್ರಗಳು. ಸ್ವತಃ ನೂಲುವುದಕ್ಕೆ ಬದಲು ಸ್ಪಿನ್ನಿಂಗ್ ಮಿಲ್ಲಿನಲ್ಲಿ ನೂಲುವುದೂ, ನೇಯುವುದಕ್ಕೆ ಬದಲು ಆಧುನಿಕ ಗಿರಣಿಗಳಲ್ಲಿ ಬಟ್ಟೆ ತಯಾರಿಸುವುದರಿಂದ ದೊಡ್ಡ ಮಟ್ಟದ ಉತ್ಪಾದನೆಯೂ ಆಗುತ್ತದೆ – ಅವಿರತವಾಗಿ ಯಂತ್ರಗಳು ಕೆಲಸಮಾಡುವುದರಿಂದ ಮಾನವನ ಶ್ರಮವೂ ಕಮ್ಮಿಯಾಗುತ್ತದೆ.